ಅಧ್ಯಕ್ಷರು : ಮಾನ್ಯ ಸಹಕಾರ ಸಚಿವರು ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ವಿರೋಧ ಪಕ್ಷದ ನಾಯಕರು ಗಮನಿಸಬೇಕು. ಇದು ಫೈನಾನ್ಸಿಯಲ್ ವಿಚಾರ. ನೀವು ಕೇಳುತ್ತಿರುವುದು 400 ಕೋಟಿ ರೂಪಾಯಿಯಷ್ಟು ಬಡ್ಡಿ ಮನ್ನಾ ಮಾಡಬೇಕು ಎಂದು. ಒಂದು ವಿಚಾರ ಹೇಳುತ್ತೇನೆ. ನೀವು 9 ಜನ ಮಾತನಾಡಿದ್ದೀರಿ. 9 ಜನಕ್ಕೂ ಒಂದು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಮಾನ್ಯ ಸಭಾಧ್ಯಕ್ಷರು ಸಲಹೆ ಕೊಟ್ಟಹಾಗೆ ಇವತ್ತು ಸಾಯಂಕಾಲವೋ ಅಥವಾ ನಾಳೆ ಬೆಳಿಗ್ಗೆಯೋ ಒಂದು ಡೀಟೇಲ್ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಆಗ ಕ್ಲಾರಿಫಿಕೇಶನ್ಸ್ ಕೇಳಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ನಾನು 15 ಜನಕ್ಕೆ ಉತ್ತರವನ್ನು ರೆಡಿ ಮಾಡಿಕೊಂಡು ಬರುವುದಕ್ಕೆ ಇಲ್ಲಿ ಆಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕಾಗಿ ಆಮೇಲೆ ಸಮಗ್ರವಾಗಿ ಉತ್ತರ ಕೊಡುತ್ತೇವೆಂದು ಹೇಳುವ ಮಾತು ಇದೆ. ಅವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಬಾರದು. ಅವರು ಸಮಗ್ರವಾದಂತಹ ಉತ್ತರವನ್ನು ಕೊಡಬೇಕು ಮತ್ತು ರಾಜ್ಯದ ರೈತರು ಈಗಾಗಲೇ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ ತಾವು ನಿನ್ನೆ ತಾನೇ ಬೆಂಗಳೂರಿನಲ್ಲಿ ಆ ದೃಶ್ಯವನ್ನು ನೋಡಿದ್ದೀರಿ. ಹಾಗಾಗಿ ನಮ್ಮೆಲ್ಲರ ಭಾವನೆಯನ್ನು ಅರಿತು, ರಾಜ್ಯದ ಜನರ ಭಾವನೆಯನ್ನು ಅರಿತು ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಅವರು ಸಮಗ್ರವಾಗಿ ಹೇಳಿಕೆ ಕೊಟ್ಟಾದ ಮೇಲೆ ನೀವು ಕ್ಲಾರಿಫಿಕೇಶನ್ಸ್ ಕೇಳಿ. ತಪ್ಪೇನಿದೆ? ಅವರು ಕ್ಲಾರಿಫೈ ಮಾಡುತ್ತಾರೆ. ಎಲ್ಲಾವೂ ಒಂದೇ. ಈಗ ಒಂದು ಕೆಲಸ ಮಾಡೋಣ. ನಾವು ಪ್ರಶ್ನೋತ್ತರ ಅವಧಿಯಲ್ಲಿ ಹತ್ತು ನಿಮಿಷ ಜಾಸ್ತಿ ಮೀರಿದ್ದೇವೆ. ಪ್ರಶ್ನೋತ್ತರ 10.15ಕ್ಕೆ ಪ್ರಾರಂಭ ಆಯಿತು. ಈಗ 11.25, ಹತ್ತು ನಿಮಿಷ ಮುಂದೆ ಹೋಗಿದೆ. ಮುಂದಿನ ಮೂರು ಪ್ರಶ್ನೆಗಳು ಏನು ಇವೆ, ಅದನ್ನು ನಾವು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳೋಣ. ಅದು ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಸಿ. ಚೆನ್ನಿಗಪ್ಪ : ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಹಳ ಇಂಪಾರ್ಟೆಂಟ್ ಕ್ವೆಶ್ಚನ್ ಇದೆ. ನೀವು ಕಂಟಿನ್ಯೂ ಮಾಡಬೇಕು. ಮಂತ್ರಿಗಳು ಇಪ್ಪತ್ತು, ಇಪ್ಪತ್ತು ನಿಮಿಷ ಉತ್ತರ ಕೊಡುತ್ತಾರೆ. ಇದನ್ನು ನಾವು ಬಹಳ ತೀವ್ರವಾಗಿ ಪ್ರತಿಭಟಿಸಬೇ ಕಾಗುತ್ತದೆ.

ಅಧ್ಯಕ್ಷರು : ಆಯಿತು, ಪ್ರತಿಭಟಿಸಿ ಪರವಾಗಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ದಯವಿಟ್ಟು ಕ್ಷಮಿಸಬೇಕು. ಸದಸ್ಯರ ಹಕ್ಕನ್ನು ಮೊಟಕುಗೊಳಿಸಬಾರದು.

(ಗೊಂದಲ)

ಅಧ್ಯಕ್ಷರು : ನಿಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಹಳ ಕಷ್ಟಪಟ್ಟು ಒಂದು ಉತ್ತರ ಬಂದಿದೆ. ಎಲ್ಲಾ ಗೌರವಾನ್ವಿತ ಮಾನ್ಯ ಸದಸ್ಯರಿಗೆ ಸಂಬಂಧಪಟ್ಟಿರತಕ್ಕಂಥ, ಆಶ್ರಯ ಸಮಿತಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ ಇದೆ. ನಾವು ಪ್ರಶ್ನೋತ್ತರ ವೇಳೆಯಲ್ಲಿ ಖಚಿತವಾದಂತಹ ಉತ್ತರಗಳನ್ನು ನಿರೀಕ್ಷೆ ಮಾಡುತ್ತೇವೆ. ಈಗ ಯಾವುದೇ ಮಂತ್ರಿಗಳಿಂದ ಸಹಿತ ಉತ್ತರವನ್ನು ಹೀಗೆಯೇ ಕೊಡಬೇಕೆಂದು ಸರ್ಕಾರದ ಮೇಲೆ ನಾವು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದವರು ಏನು ಬೇಕಾದರೂ ಉತ್ತರ ಕೊಡಲಿ. ನಾವು ಬಡ್ಡಿ ಮನ್ನಾ ಮಾಡುವುದಿಲ್ಲ; ಸಾಲ ಮನ್ನಾ ಮಾಡುವುದಿಲ್ಲ, ನಾವು ಹೀಗೆಯೇ ಎಂದು ಹೇಳಲಿ, ನಮ್ಮದು ತಕರಾರು ಇಲ್ಲ. ಈಗ ಪ್ರಶ್ನೆ ಏನು ಇದೆ? ಪ್ರಶ್ನೆ ಬಹಳ ಮಹತ್ತರವಾಗಿರತಕ್ಕಂಥಾದ್ದು. ದಯವಿಟ್ಟು ತಾವು ಇವತ್ತಿಗೆ ಅವಕಾಶ ಮಾಡಿಕೊಡಿ.

ಶ್ರೀ ಎನ್. ಚೆಲುವರಾಯಸ್ವಾಮಿ : ಇವತ್ತು ಕೊನೆಯಲ್ಲಿ ಇರತಕ್ಕ ಪ್ರಶ್ನೆಯನ್ನು ನೀವು ರದ್ದು ಮಾಡಿ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಹೇಗೆ? ದಯವಿಟ್ಟು ಆ ರೀತಿ ಮಾಡಬೇಡಿ ನಮಗೆ ಹತ್ತು ನಿಮಿಷಗಳ ಕಾಲವಕಾಶ ಕೊಡಿ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ, ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆಯೊಳಗೆ ಮುಗಿಸಬೇಕು ಎಂದು ಇರುವುದು. ಇಲ್ಲಿ ಸಪ್ಲಿಮೆಂಟರಿಯನ್ನು ಅನೇಕ ಸದಸ್ಯರು ಕೇಳುತ್ತಾರಲ್ಲ, ಅವರು ಅರ್ಥ ಮಾಡಿಕೊಳ್ಳಬೇಕು; ಯಾವ ಪ್ರಶ್ನೆಗೂ ಸಂಬಂಧ ಇರುವುದಿಲ್ಲ. ಯಾರೋ ಪ್ರಶ್ನೆ ಕೇಳುತ್ತಾರೆ, ಅಥವಾ ಆ ಕ್ಷೇತ್ರಕ್ಕೆ ಅವರಿಗೆ ಸಂಬಂಧ ಇರುವುದಿಲ್ಲ, ಆ ಸದಸ್ಯರೂ ಪ್ರಶ್ನೆ ಕೇಳುತ್ತಾರೆ. ಆ ರೀತಿ ಆಗಿದ್ದರಿಂದ ಈ ರೀತಿ ಆಗಿರುವುದು ಅಷ್ಟೇ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ : ಸರ್ಕಾರ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳತಕ್ಕಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮಾಹಿತಿ ಬೇಕಾಗಿರತಕ್ಕಂತಹ ಸಂದರ್ಭದಲ್ಲಿ ಕೇಳಿರುವ ಪ್ರಶ್ನೆಗಳು ಬಂದಿರುವಾಗ ಮಾತ್ರ ಹೀಗೆ ಹೇಳಿದರೆ ಹೇಗೆ?

ಅಧ್ಯಕ್ಷರು : ಹಾಗಲ್ಲ, ಕ್ಷಮಿಸಿ. ನನ್ನ ಪ್ರಶ್ನೆ ಏನೆಂದರೆ, ಅನೇಕ ಸದಸ್ಯರು ಒಂದೂವರೆ ಗಂಟೆ, ಎರಡು ಗಂಟೆ, ಮೂರು ಗಂಟೆ ಪ್ರಶ್ನೋತ್ತರ ಮಾಡುತ್ತೀರಲ್ಲ ಎಂದು ಹೇಳಿದರೆ ಅದಕ್ಕೇನು ನಾನು ಉತ್ತರ ಹೇಳಲಿ? ಪ್ರಶ್ನೋತ್ತರ ಅವಧಿ ಎಂದರೆ ಒಂದು ಗಂಟೆ ತಾನೇ?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನೀವು ಸದಸ್ಯರನ್ನು ಕಂಟ್ರೋಲ್ ಮಾಡಿದ ಹಾಗೆ ಮಂತ್ರಿಗಳಿಗೂ ಕಂಟ್ರೋಲ್ ಮಾಡಬೇಕು. ಅವರು 15 ನಿಮಿಷ 20 ನಿಮಿಷ ಉತ್ತರ ಕೊಡುತ್ತಿದ್ದರೆ ಹೇಗೆ.

ಅಧ್ಯಕ್ಷರು : ನಾನು ಕೆಲವು ಮಂತ್ರಿಗಳಿಗೆ ಈಗಾಗಲೇ ಹೇಳಿದ್ದೇನೆ. ಉತ್ತರ ಜಾಸ್ತಿ ಕೊಡಬೇಡಿ ಎಂದು ಕೆಲವು ಮಂತ್ರಿಗಳಿಗೆ ಹೇಳಿದ್ದೇನೆ. ಸದನದಲ್ಲಿ ಹೇಳಿಲ್ಲ; ಬೇರೆ ಸಮಯದಲ್ಲಿ ಕರೆಸಿ ಹೇಳಿದ್ದೇನೆ. ನೀವು ಉತ್ತರವನ್ನು ದೀರ್ಘವಾಗಿ ಕೊಡಬೇಡಿ, ಸಂಕ್ಷಿಪ್ತವಾಗಿ ಕೊಡಿ ಎಂದು ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಸದಸ್ಯರಿಗತ ಒಂದು, ಮಂತ್ರಿಗಳಿಗೆ ಮತ್ತೊಂದು ಎಂದು ದಯವಿಟ್ಟು ಆ ರೀತಿ ಮಾಡಬೇಡಿ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಎಲ್ಲ ಸದಸ್ಯರಿಗೂ ಸರಿಯಾದ ಅವಕಾಶ ಕೊಡಬೇಕು. ನೀವು ಅನುಮತಿ ಕೊಡಬೇಕು. ಇಲ್ಲದಿದ್ದರೆ ಬಾಯ್ಕಾಟ್ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಪ್ರಶ್ನೋತ್ತರ ಅವಧಿಯನ್ನು ಎಕ್ಸ್‌ಟೆಂಡ್ ಮಾಡಬೇಕೆ ಅಥವಾ ಬೇಡವೇ ಎನ್ನುವುದನ್ನು ಬಿಎಸಿ ಮೀಟಿಂಗ್‌ನಲ್ಲಿ ಇಟ್ಟು ತೀರ್ಮಾನ ತೆಗೆದುಕೊಳ್ಳೋಣ. ಬಿಎಸಿ ಮೀಟಿಂಗ್‌ನಲ್ಲಿ ಏನು ಹೇಳುತ್ತಾರೋ ಕೇಳೋಣ ಪ್ರಶ್ನೋತ್ತರ ಅವಧಿ ಆದಮೇಲೆ ಬಿಎಸಿಯನ್ನು ಕರೆಯೋಣ. ನಾನು ಈಗ ಪ್ರಶ್ನೋತ್ತರ ಅವಧಿಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಈ ಸದನ ಪ್ರಾರಂಭ ಆಗುವುದಕ್ಕೆ ಮುಂಚೆ ನಮಗೆ ಇಲ್ಲಿ ಒಂದು ನೀತಿ ಸಂಹಿತೆ ತರುತ್ತೇವೆ ಎಂದು ಹೇಳಿದ್ದೀರಿ. ಏತಕ್ಕೆ ತರುತ್ತೇವೆಂದರೆ ಶಾಸಕರುಗಳಿಗೆ, ಮುಂತ್ರಿಗಳಿಗೆ ಈ ಸದನದ ಘನತೆ ಗೌರವ ಹೆಚ್ಚುವುದಕ್ಕೆ ಸೂಕ್ತವಾಗುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ಎಲ್ಲವನ್ನೂ ಹೇಳಿದ್ದೀರಿ ಅಧ್ಯಕ್ಷರೆ. ಅದು ಬಹಳ ಸ್ವಾಗತಾರ್ಹವಾದಂತಹದು. ನಾವು ಈ ಸದನದ ಘನತೆ ಗೌರವಗಳನ್ನು ಹೆಚ್ಚು ಮಾಡಲೇಬೇಕು. ಆ ರೀತಿಯಲ್ಲಿ ನಾವೆಲ್ಲರೂ ಒಟ್ಟಿಗೆ ಹೋಗಲೇಬೇಕು. ಆದರೆ ಇವತ್ತು ಪ್ರಮುಖವಾಗಿ ಎಂಥೆಂಥ ಸಮಸ್ಯೆಗಳು ಬರುತ್ತಿವೆ ಎಂದು ನೋಡುತ್ತಿದ್ದೇವೆ. ಸರ್ಕಾರದ ಅನೇಕ ವೈಫಲ್ಯತೆ ಕಾರಣದಿಂದಾಗಿ, ಬಹಳ ಗಂಭೀರವಾದಂತಹ, ರಾಜ್ಯ ಮಟ್ಟದ ಜನ ಪ್ರತಿಯೊಬ್ಬರೂ ಸದನದಲ್ಲಿ ಏನು ನಡೆಯುತ್ತದೆ? ಸದಸ್ಯರು ನಾವೇನು ಪ್ರಶ್ನೆಗಳನ್ನು ಕೇಳಿರುತ್ತೇವೆ, ಅದಕ್ಕೆ ಉತ್ತರ ಏನು ಬರುತ್ತದೆ ಎಂದು ನೋಡುತ್ತಿರುತ್ತಾರೆ.

ಅಧ್ಯಕ್ಷರು : ಆಯಾಯ ಸದಸ್ಯರು ಪ್ರಶ್ನೆ ಏನು ಕೇಳಿರುತ್ತಾರೆ. ಅದು ಅವರಿಗೆ ಬಹಳ ಮುಖ್ಯವಾದುದು ಗಂಭೀರವಾದುದು. ಪ್ರತಿಯೊಬ್ಬ ಸದಸ್ಯರಿಗೂ ಅವರವರ ಪ್ರಶ್ನೆ ಬಹಳ ಪ್ರಮುಖವಾಗಿರುತ್ತದೆ. Until the BAC takes a decision I cannot extend the question hour.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇವತ್ತು ಒಂದು ದಿನ ತಾವು ಅಲೋ ಮಾಡಿ.

ಅಧ್ಯಕ್ಷರು : ಇವತ್ತು ಅಲೋ ಮಾಡಿದರೆ ಇನ್ನು ಮೂರು ತಿಂಗಳು ಅಲೋ ಮಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗಾದರೆ ಸಭೆಯನ್ನು ಅಡ್ಜರ್ನ್ ಮಾಡಿ.

ಅಧ್ಯಕ್ಷರು : ನಾವು ಅಡ್ಜರ್ನ್ ಮಾಡೋಣ. ಕಾಗದ ಪತ್ರಗಳ ಮಂಡನೆ ಆದಮೇಲೆ ನಾವು ಸಭೆಯನ್ನು ಮುಂದೂಡೋಣ.

ಅಧ್ಯಕ್ಷರು : ನಾನು ಏಕೆ ಇವತ್ತು ಈ ರೀತಿ ಮಾಡುತ್ತಿದ್ದೇನೆಂದರೆ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವತ್ತೂ ವಿಧಾನಸಭೆಯಲ್ಲಿ ಈ ರೀತಿ ಆಗಿರಲಿಲ್ಲ. ವಿಧಾನ ಪರಿಷತ್ತಿನಲ್ಲಿ ಮೂರು ಮೂರು ಗಂಟೆಗಳ ಕಾಲ ಪ್ರಶ್ನೋತ್ತರ ವೇಳೆ ನಡೆಯುತ್ತಿದೆ.

ಅಧ್ಯಕ್ಷರು : ವಿಧಾನ ಪರಿಷತ್ತಿನವರ ಬಗ್ಗೆ ನಾವು ವಿಚಾರ ಮಾಡಬೇಕಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ xxx ಬಂದಾಗ ಮಾತ್ರ ತಾವು ಏಕೆ ತಡೆ ಮಾಡುತ್ತಿದ್ದೀರಿ? ಇದರ ಬಗ್ಗೆ ಮೊದಲೇ ಏಕೆ ಹೇಳಲಿಲ್ಲ?

ಅಧ್ಯಕ್ಷರು : ನಾನು ಪ್ರಶ್ನೋತ್ತರಕ್ಕೆ ಅವಕಾಶ ಕೊಡುವುದಿಲ್ಲ. ಬಿಎಸಿ ತೀರ್ಮಾನದ ಪ್ರಕಾರ ನಾನು ನಡೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗಿದ್ದರೆ ಸದನವನ್ನು ಮುಂದೂಡಿ, ಬಿಎಸಿ ಮೀಟಿಂಗನ್ನು ಕರೆಯಿರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಮೂರು ಪ್ರಶ್ನೆಗಳಿಗೆ ಉತ್ತರ ಕೊಡಲು ನಮ್ಮಿಂದೇನು ಅಭ್ಯಂತರವಿಲ್ಲ. ಆದರೆ ಅದು ತಮ್ಮ ತೀರ್ಮಾನಕ್ಕೆ ಬಿಟ್ಟು. ಆದರೆ ಯಾರೂ ಸಹ ತಮ್ಮ ಡಿಸ್ಕ್ರಿಷನ್‌ಗೆ ಚಾಲೆಂಜ್ ಮಾಡುವಂತಿಲ್ಲ. ಯಾರೂ ಸಹ ತಮ್ಮ ಅಥಾರಿಟಿಯನ್ನು ಚಾಲೆಂಜ್ ಮಾಡುವಂತಿಲ್ಲ. ಪ್ರತಿಯೊಬ್ಬರೂ ತಮ್ಮ ತೀರ್ಪನ್ನು ಪಾಲಿಸಬೇಕು. ಬೇಕಾಗಿದ್ದರೆ ರಿಕ್ವೆಸ್ಟ್ ಮಾಡಿಕೊಳ್ಳಬಹುದು. ಆದರೆ ಅವರು ತಮ್ಮನ್ನು ಥ್ರೆಟನ್ ಮಾಡುವಂತಿಲ್ಲ.

ಅಧ್ಯಕ್ಷರು : ಈ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಬೇಕಾದರೆ ನಾಳೆ ತೆಗೆದು ಕೊಳ್ಳೋಣ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಮೂವತ್ತು ವರ್ಷ ಇಲ್ಲಿ ಸೇವೆ ಮಾಡಿದ್ದು, ಪ್ರಶ್ನೋತ್ತರ ವೇಳೆ ಬೇಡವೆಂದು ಹೇಳುತ್ತೀರಾ? ಪ್ರಶ್ನೆ ಕೇಳುವುದು ಬೇಡವೆಂದು ಹೇಳುತ್ತೀರಲ್ಲ?

ಅಧ್ಯಕ್ಷರು : ನಾನು ಪ್ರಶ್ನೋತ್ತರಕ್ಕೆ ಅವಕಾಶ ಕೊಡುವುದಿಲ್ಲ. ಇವತ್ತು ಒಂದು ದಿವಸ ಅವಕಾಶ ಕೊಟ್ಟರೆ ಮುಂಬರುವ ಎಲ್ಲಾ ದಿವಸಗಳಲ್ಲೂ ಕೇಳುತ್ತೀರಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಖರ್ಗೆಯವರೆ, ತಾವು ಹಿಂದೆ ವಿರೋಧಪಕ್ಷದಲ್ಲಿ ಕುಳಿತು ಏನು ಮಾಡಿದ್ದೀರಿ ಅದನ್ನೇ ನಾವು ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಅಲ್ಲಿದ್ದಾಗಲೂ ನಾವು, ನೀವು ಅಧ್ಯಕ್ಷರ ಮಾತನ್ನೇ ಕೇಳುತ್ತಿದ್ದೆವು.

ಶ್ರೀ ಎಸ್.ಸುರೇಶ್‌ಕುಮಾರ್ : ತಾವು ಬಿಟ್ಟುಬಿಡಿ. ನಾವು ಅಧ್ಯಕ್ಷರನ್ನು ಒಲಿಸಿಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರೂ ಹೆದರಿಸಬೇಡಿ.

---

**xxx ಈ ಪದಗಳನ್ನು ಸದಸ್ಯರು ವಾಪಸ್ಸು ಪಡೆಯುತ್ತೇನೆ ಎಂದು ಹೇಳಿದ್ದರಿಂದ ಕಡತದಿಂದ ತೆಗೆದುಹಾಕಲಾಗಿದೆ.**

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗೌರವಾನ್ವಿತ ಸ್ಥಾನಕ್ಕೆ ಚ್ಯುತಿ ಬರುವ ರೀತಿಯಲ್ಲಿ ನಡೆದುಕೊಳ್ಳಲು ತಯಾರಿಲ್ಲ. ಇಂಥ ವಿಚಾರದಲ್ಲಿ ಬಾವಿಗೆ ಬಂದು ಧರಣಿ ಆಡಲು ನಾವು ತಯಾರಿಲ್ಲವೆಂದು ನಿನ್ನೆ ಸಹ ಹೇಳಿದ್ದೇನೆ. ಅತ್ಯಂತ ವಿನಯ, ಗೌರವ, ನಮ್ರತೆಯಿಂದ ಈ ಮೂರು ಪ್ರಶ್ನೆಗಳಿಗೆ ಇವತ್ತು ಅವಕಾಶ ಕೊಡಿ ಎಂದು ವಿನಂತಿಸಿ ಕೊಳ್ಳುತ್ತಿದ್ದೇನೆ. ಬೇಕಾದರೆ ತಾವು ಹೇಳಿದಂತೆ ಇನ್ನು ಮುಂದೆ ಅದೇ ರೀತಿ ನಡೆದುಕೊಳ್ಳೋಣ. ಇದರ ಮೇಲೆ ತೀರ್ಮಾನ ನೀಡುವುದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು : ಹಾಗಿದ್ದರೆ ಇವತ್ತು ಒಂದು ಸಲ ಅವಕಾಶ ಕೊಡುತ್ತೇನೆ. ಇನ್ನು ಮುಂದೆ ತಾವು ಇದೇ ರೀತಿ ಕೇಳಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೊಂದು ಸಲ ಅವಕಾಶ ಕೊಟ್ಟುಬಿಡಿ, ಇನ್ನು ಮೇಲೆ ಕೊಡಲು ಹೋಗಬೇಡಿ.

ಅಧ್ಯಕ್ಷರು : ಇವತ್ತು ಒಂದು ದಿವಸ ಕೇಳಿ, ಇನ್ನು ಮುಂದೆ ಈ ರೀತಿ ಕೇಳಬಾರದು. ನಾನು ಏಕೆ ಹೀಗೆ ಮಾಡಿದೆ ಎಂದರೆ, ಇವತ್ತು ಒಂದು ದಿವಸ ಎಕ್ಸ್‌ಟೆಂಡ್ ಮಾಡಿದರೆ ಪ್ರತಿಯೊಂದು ದಿವಸ ಅರ್ಧಗಂಟೆ, ಒಂದು ಗಂಟೆ ಎಕ್ಸ್‌ಟೆಂಡ್ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಮೊದಲನೆಯ ದಿವಸವಾದ ಇವತ್ತು ಮಾತ್ರ ಎಲ್ಲರ ಬೇಡಿಕೆ ಮೇರೆಗೆ ಅವಕಾಶ ಕೊಡುತ್ತಿದ್ದೇನೆ. ನಾಳೆಯಿಂದ ದಯವಿಟ್ಟು ಕೇಳಬೇಡಿ. ಮಾನ್ಯ ಸದಸ್ಯರುಗಳು ಬೇರೆ ಸದಸ್ಯರ ಪ್ರಶ್ನೆ ಬಂದಾಗ ಹೊಂದಾಣಿಕೆ ಮಾಡಿಕೊಂಡರೆ ಎಲ್ಲಾ ಸರಿಯಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಮ್ಮ ಮಾತೇ ಕೊನೆಯ ಮಾತು, ಅದನ್ನು ನಾವೆಲ್ಲರೂ ಒಪ್ಪುತ್ತೇವೆ. ದಯವಿಟ್ಟು ಇವತ್ತು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಗಲಿ

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಸಿಂಧ್ಯರವರು ಮಾತನಾಡುತ್ತ ಅದು ಸರಿಯಲ್ಲ. ಅದನ್ನು ವಾಪಸ್ ಪಡೆದುಕೊಳ್ಳಬೇಕು

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಗಲಿ ವಾಪಸ್ ಪಡೆಯುತ್ತೇನೆ.

**ರಾಜ್ಯದಲ್ಲಿ ಆಶ್ರಯ ಸಮಿತಿಗಳು**

58 (17) ಶ್ರೀ ಅಪ್ಪಯ್ಯ ಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಆಶ್ರಯ ಸಮಿತಿಗೆ ನಾವು ನಿರ್ದೇಶನ ಹೊಂದಿದ ಸದಸ್ಯರ ಅಧಿಕಾರವೇನು;

ಆ) ಸಭೆಯಲ್ಲಿ ಒಮ್ಮತ ಮೂಡದಿದ್ದಾಗ ಅಧ್ಯಕ್ಷರು ಯಾವ ರೀತಿ ನಿರ್ಣಯ ಕೈಗೊಳ್ಳಬಹುದಾಗಿದೆ; ಇದರ ಬಗ್ಗೆ ಕಾನೂನಿನಡಿಯಲ್ಲಿ ಇರುವ ನಿಯಮಗಳೇನು; ವಿವರಣೆ ನೀಡುವುದು;